Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD
ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 33
ದಿನಾಂಕ: 17.02.2026


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

# ನಮ್ಮ ಆರ್.ಸಿ.ಸಿ. ಐಸಿರಿ - ರೋಟರಿ ಜಿಲ್ಲೆಗೇ Best RCC




ತಾ. 08/02/2026, ಭಾನುವಾರದಂದು ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಜಿಲ್ಲಾ ಸಮುದಾಯದಳ ಸಮ್ಮೇಳನ "ಸಾಂಗತ್ಯ" ನಡೆಯಿತು. ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದ ಸಭೆಯಲ್ಲಿ ಐಸಿರಿ ಸದಸ್ಯರುಗಳಾದ ಜಿಲ್ಲಾ RCC ಉಪಸಭಾಪತಿ ರೊ. PHF ಗುರುಪ್ರಸಾದ್ ಕಾಮತ್ ಹಾಗೂ ಜಿಲ್ಲಾ RCC ಪ್ರತಿನಿಧಿ, RCC ಐಸಿರಿ ಸದಸ್ಯರಾದ ಜಯರಾಮ್ ಶೆಟ್ಟಿಗಾರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ RCC ಐಸಿರಿ ಸದಸ್ಯರು ತುಳುನಾಡ ಜನಜೀವನದ ಅದ್ಭುತ ಪ್ರದರ್ಶನ ನೀಡಿ ಪ್ರಥಮ ಸ್ಥಾನ ವಿಜೇತರಾದರು.

ಅಲ್ಲದೆ 2024–25 ರ ಸಾಲಿನ ಉತ್ತಮ ಕಾರ್ಯಚಟುವಟಿಕೆಗಳಿಗೆ ಮೂರು ವಿಭಾಗದಲ್ಲಿ ಪ್ರಥಮ, ಎರಡು ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲೆಗೆ **Best RCC Award** ಪಡೆದಿರುತ್ತಾರೆ.

RCC ಐಸಿರಿಯ ಸರ್ವಸದಸ್ಯರಿಗೂ, RCC Co–ordinator ರೊ. ಪ್ರಭಾಕರ್ ಶೆಟ್ಟಿ ಯವರಿಗೂ ರೋಟರಿ ಐಸಿರಿಯ ಅಧ್ಯಕ್ಷರಾದ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ ಸರ್ವಸದಸ್ಯರ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿರುತ್ತಾರೆ.

ಛಾಯಾಸಿರಿ ಭಂಡಾರದ ಸಂಗ್ರಹದಿಂದ ಆಯ್ದ ಈ ಮೇಲಿನ ಫೋಟೋಗಳಲ್ಲಿ ರೋಟರಿ ಐಸಿರಿಯ 2024–25ನೇ ಸಾಲಿನ ಅಧ್ಯಕ್ಷ ರೊ. PHF. ಸುನೀಲ್ ಕುಮಾರ್, ಕಾರ್ಯದರ್ಶಿ ರೊ. PHF. ಪಾಂಡುರಂಗ ಲಾಗ್ವನ್‌ಕರ್, 2025–26ನೇ ಸಾಲಿನ ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ಸಮುದಾಯದಳ ಐಸಿರಿಯ 2024–25ನೇ ಸಾಲಿನ ಅಧ್ಯಕ್ಷ ಶ್ರೀ ಸತೀಶ್ ನಾಯ್ಕ್, ಕಾರ್ಯದರ್ಶಿ ಶ್ರೀಮತಿ ಶಾಲಿನಿ ಸಾಮಂತ್, 2025–26ನೇ ಸಾಲಿನ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ, ಕಾರ್ಯದರ್ಶಿ ಶ್ರೀಮತಿ ಶಾರದಾ, RCC ಜಿಲ್ಲಾ ಉಪ ಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್, ವಲಯ ಸೇನಾನಿ ರೊ. PHF. ಸ್ಮಿತಾ ಕಾಮತ್, ವೃತ್ತಿಸೇವಾ ನಿರ್ದೇಶಕ ರೊ. ಕೆ. ಪ್ರಭಾಕರ ಶೆಟ್ಟಿ, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, RCC ಜಿಲ್ಲಾ ಪ್ರತಿನಿಧಿ ಶ್ರೀ ಜಯರಾಮ್ ಶೆಟ್ಟಿಗಾರ್ ರನ್ನು ಕಾಣಬಹುದು.

# ಒಬ್ಬರಿಗೆ "ಟೇಕನ್ ಫಾರ್ ಗ್ರಾಂಟೆಡ್" ಆಗುವ ಮುನ್ನ...!

ನಮ್ಮ ನಡುವಿನ ಬಹುತೇಕರ ಒಂದು ಕಾಮನ್ ಅಪ್ರೋಚ್ ಏನು ಗೊತ್ತಾ..?

ನೀವು ಯಾರಿಗಾದರೂ ಯಾವುದೇ ವಿಚಾರಕ್ಕೆ ಸುಲಭಕ್ಕೆ ಸಿಗುವಂತಿದ್ದರೆ, ಒಬ್ಬರು ಕೇಳಿದ ತಕ್ಷಣ ಹಿಂದೆ ಮುಂದೆ ಯೋಚಿಸದೇ ಸಹಾಯ ಮಾಡುವವರಾಗಿದ್ದರೆ, ಒಬ್ಬರ ಫೋನ್ ಕಾಲ್ ಬಂದ ಕೂಡಲೇ ಅದನ್ನು ಕೂಡಲೇ ರಿಸೀವ್ ಮಾಡುವಂತಿದ್ದರೆ, ಮತ್ತೊಬ್ಬರು ಯಾಚಿಸಿದ ಕೆಲಸವನ್ನು ಅದೆಷ್ಟೇ ಕಷ್ಟವಾಗಿರಲೀ ಅದನ್ನು ತೀರ ಸುಲಭ ಕಾಣಿಸುವಂತೆ ಮಾಡಿಕೊಟ್ಟರೆ, ಯಾರಾದರೂ ಅವರಾಗಿಯೇ ಎಂದೂ ಕರೆ ಮಾಡದೇ ಇದ್ದರೂ ನೀವಾಗಿಯೇ ಪದೇ ಪದೇ ಅವರಿಗೆ ಆತ್ಮೀಯವಾಗಿ ಮಾತನಾಡಲು ಬಯಸಿ ಫೋನ್ ಮಾಡುತ್ತಿದ್ದರೆ, ನಿಮ್ಮ ವೈಯಕ್ತಿಕ ಮತ್ತು ವೃತ್ತಿ ಬದುಕಿನ ಅಪ್ರೋಚ್ ನಲ್ಲಿ ನೀವು ತುಂಬಾ ಸರಳ ಮತ್ತು ವಿನೀತರಾಗಿ ಎಲ್ಲರ ಕೈಗೂ "ಈಸೀ ಅಕ್ಸೆಸ್ಸಬಲ್" ಎನ್ನುವಂತಿದ್ದರೆ, ನಿಮ್ಮಲ್ಲಿ ಹಣ, ವಿದ್ಯೆ, ಅಧಿಕಾರ ಎಲ್ಲವೂ ಇದ್ದೂ ಏನೂ ಡೌಲು ಮಾಡದಂತೆ, ಏನೂ ಬಿಲ್ಡಪ್ ಕೊಡದಂತೆ ಸಮಾಜದ ಕಣ್ಣಿಗೆ ಕಾಣಿಸಿಕೊಳ್ಳುತ್ತಿದ್ದರೆ, ಯಾವುದೇ ಕಾರ್ಯಕ್ರಮಕ್ಕೆ ಅಥವಾ ಸಮಾರಂಭಕ್ಕೆ ಆಹ್ವಾನಿಸಿದ ತಕ್ಷಣ ಏನೊಂದೂ ಯೋಚಿಸದೇ ಒಳ್ಳೆಯ ಮನಸಿನಿಂದ ತಪ್ಪದೇ ಅಟೆಂಡ್ ಆಗುತ್ತಿದ್ದರೆ, ಒಬ್ಬರಿಗೆ ಅಗತ್ಯಕ್ಕಿಂತ ಹೆಚ್ಚಿಗೆ ಗೌರವ ಕೊಡುವ ಸ್ವಭಾವ ನಿಮ್ಮದಾಗಿದ್ದರೆ, ಮತ್ತೊಬ್ಬರು ನಿಮ್ಮನ್ನು ಹೇಗೆ ಟ್ರೀಟ್ ಮಾಡಿದರೂ "ಪರವಾಗಿಲ್ಲ ಚಲ್ತಾಹೈ ಕಣ್ರೀ" ಎಂಬ ಮನಃಸ್ಥಿತಿ ನಿರ್ಮಾಣವಾಗಲು ಕಾರಣರಾಗುವಂತೆ ನಿಮ್ಮ ಸ್ವಭಾವವಿದ್ದರೆ.....,

ಒಟ್ಟಾರೆಯಾಗಿ ಇತರರಿಗೆ ನೀವು ಯಾವ ವಿಷಯಕ್ಕಾಗಲೀ ಸಹಾಯಕ್ಕಾಗಲೀ ಸುಲಭಕ್ಕೆ ಸಿಗಬಹುದಾದ "ಟೇಕನ್ ಫಾರ್ ಗ್ರಾಂಟೆಡ್" ಸ್ಟಫ್ ಅಂತ ಅನಿಸಿದ್ದೇ ಆದರೆ....

ಊಫ್......ಬರೆದಿಟ್ಟುಕೊಳ್ಳಿ.... ಸಾಮಾನ್ಯವಾಗಿ ಈ ಸಮಾಜ ನಿಮ್ಮನ್ನು ನಿಮ್ಮ ಅರ್ಹತೆಗೆ ತಕ್ಕಂತೆ ನಡೆಸಿಕೊಳ್ಳುವುದಿಲ್ಲ ಎಂದೇ ಅರ್ಥ...! ಅಷ್ಟೇ ಅಲ್ಲ, ಜನ ನಿಮ್ಮನ್ನು ಸುಲಭಕ್ಕೆ ಟ್ರೀಟ್ ಮಾಡಲು ನಿಮ್ಮೊಳಗಿನ ಪಾಸಿಟಿವ್ ಆಗಿ ಕಾಣಿಸಲ್ಪಟ್ಟರೂ, ಅಸಲಿಗೆ ನೆಗೆಟೀವ್ ಆಗಿ ಕಾಡುವ ಈ ರೀತಿಯ ಅಂಶಗಳೇ ಕಾರಣವಾದರೂ ಅಚ್ಚರಿಯೇನಿಲ್ಲ!

ಈ ಥರಾ ಹೇಳೋದೇ ಒಂಥರಾ ನೆಗೆಟೀವ್ ಆಗಿ ಕಾಣುತ್ತಲ್ಲಾ ಎಂದು ಅಚ್ಚರಿಯೆನಿಸುತ್ತದೆಯಲ್ಲವೇ..?

ಒಮ್ಮೊಮ್ಮೆ ಈ ಸಮಾಜ ಯಾಕೆ ಹೀಗೆ ಎಂದನಿಸುತ್ತದೆಯಾದರೂ ಪ್ರಾಕ್ಟಿಕಲ್ಲಾಗಿ ಇದು ನೈಜತೆಗೆ ಹತ್ತಿರ.

ಹಾಗೇ ಸುಮ್ಮನೇ ನೋಡಿ.! ಬಹಳಷ್ಟು ಸಂದರ್ಭಗಳಲ್ಲಿ ಸಪೋಸ್ ನಿಮ್ಮ ಆತ್ಮೀಯರಿಗೋ ಅಥವಾ ತೀರ ಪರಿಚಿತರಿಗೋ ಮಾತನಾಡುವ ಆಸೆಯಿಂದ ನೀವಾಗಿಯೇ ಆಗಾಗ್ಗೆ ಫೋನ್ ಕರೆ ಮಾಡುತ್ತಲೇ ಇದ್ದರೆ ಒಂದು ಹಂತದ ನಂತರ ನಿಮ್ಮ ಕರೆ ಬಂದಾಕ್ಷಣ ಬಿಜಿ ಟೋನ್ ಗೆ ಹಾಕಿಬಿಡುತ್ತಾರೆ. ಇಲ್ಲವೇ ಯಾವುದೋ ಕಾರಣ ಹೇಳಿ ಅವಾಯ್ಡ್ ಮಾಡುತ್ತಾರಲ್ಲವೇ.?

ಏಕೆಂದರೆ ಅವರ ದೃಷ್ಟಿಯಿಂದ ನಿಮ್ಮದು ಅನಪೇಕ್ಷಿತ ಕರೆ, ನಿಮ್ಮೊಂದಿಗೆ ಮಾತನಾಡುವುದು ಟೈಮ್ ವೇಸ್ಟು, ಈ ಮನೋಭಾವಕ್ಕೆ ಕಾರಣ, ಅವರ ದೃಷ್ಟಿಯಿಂದ ನೀವು "ಟೇಕನ್ ಫಾರ್ ಗ್ರಾಂಟೆಡ್" !

ಅದೇ ಅವರ ಬಗ್ಗೆ ಕೇರೇ ಇಲ್ಲದ ಆದರೆ ಅಪರೂಪದ ಅಥವಾ ವ್ಯವಹಾರಿಕ ಫೋನ್ ಕರೆಗಳನ್ನು ನಿದ್ದೆಯಲ್ಲಾದರೂ ರಿಸೀವ್ ಮಾಡಿ ಮಾತನಾಡುತ್ತಾರೆ. ಆ ಮಾತು ಬೇರೆ !

ಹಾಗೆಯೇ ಸಹಾಯ ಅಂತ ಕೇಳಿ ಯಾರಾದರೂ ನಿಮ್ಮನ್ನು ಅಪ್ರೋಚ್ ಮಾಡಿದಾಗ ಅವರ ಕಷ್ಟಕ್ಕೆ ನೆರವಾಗಿ ಅವರಿಗೆ ತೀರ ಸುಲಭವಾಗಿ ಸಹಾಯ ಮಾಡಿ ನೋಡಿ.! ಹಾಗೆ ಸಹಾಯ ಪಡೆದ ಬಹುತೇಕರಿಗೆ ನಿಮ್ಮ ಬೆಲೆ ಹಾಗೂ ಸಹಾಯದ ಮೌಲ್ಯ ಎರಡೂ ಅರ್ಥವಾಗದು. ವಿಪರ್ಯಾಸವೆಂದರೆ ಯಾರು ಸಹಾಯ ಮಾಡಿರುವುದಿಲ್ಲವೋ ಅಥವಾ ಮಾಡಿದರೂ ಅತ್ತೂ ಕರೆದು ಕಾಡಿಸಿ ಹೆಲ್ಪ್ ಮಾಡಿರುತ್ತಾರೋ ಅಂಥವರಿಗೆ ಸ್ವಲ್ಪ ಭಯ ಭಕ್ತಿಯನ್ನಾದರೂ ಇವರು ತೋರಿಸುತ್ತಾರೆ.

ಇನ್ನೂ ಸಿಂಪಲ್ ಆದ ಉದಾಹರಣೆ ಮೂಲಕ ಇದನ್ನು ಬಿಡಿಸುವುದಾದರೆ, ನಿಮ್ಮ ಆತ್ಮೀಯರಿಗೋ ಸ್ನೇಹಿತರಿಗೋ ನೀವು ನೀವಾಗಿಯೇ ನಿತ್ಯವೂ ಕಳಿಸುವ ಮೆಸೇಜಿಗೆ ಅಲ್ಲಿಂದ ಉತ್ತರವಾಗಲೀ ಅಥವಾ ಆಗಾಗ್ಗೆ ನೀವು ಪ್ರೀತಿಯಿಂದ ಮಾಡುವ ಕರೆಗಳಿಗೆ ತಕ್ಷಣದ ಸ್ಪಂದನೆಯಾಗಲೀ ಸಿಗಲಿಲ್ಲವೆಂದರೆ ಅರ್ಥ, ನೀವು ಅವರ ಪಾಲಿಗೆ ಟೇಕನ್ ಫಾರ್ ಗ್ರಾಂಟೆಡ್ ನಂತೆ ಅಮುಖ್ಯ ಎಂದೇ ! ಅಥವಾ ನಿಮಗೆ ಉತ್ತರಿಸಿದರೂ ಬಿಟ್ಟರೂ ಚಲ್ತಾ ಹೈ ಎಂಬಂತೆ ನಿಮ್ಮನ್ನು ಆದ್ಯತೆಯಲ್ಲದ ಸಂಪರ್ಕದಂತೆ ಟ್ರೀಟ್ ಮಾಡಲಾಗಿರುತ್ತೆ.

ನೀವು ಉದ್ಯೋಗ ಮಾಡುವ ಸ್ಥಳದಲ್ಲಿ, ಕಚೇರಿಗಳಲ್ಲಿ ನಿಮ್ಮ ಸಹೋದ್ಯೋಗಿಗಳೊಂದಿಗೆ ಅಥವಾ ಸಬಾರ್ಡಿನೇಟ್ಸ್ ಜೊತೆಗೆ ನಿಮ್ಮ ಪೊಸಿಷನ್ನನ್ನೂ ಮರೆತು, ಸಿಕ್ಕಾಪಟ್ಟೆ ಸಲಿಗೆಯಿಂದ ಫ್ರೆಂಡ್ಲಿಯಾಗಿ ಇದ್ದಲ್ಲಿ ಅವರು ನಿಮ್ಮನ್ನು ಟ್ರೀಟ್ ಮಾಡುವ ರೀತಿಗೂ, ಅದೇ ಒಂದು ವೃತ್ತಿಪರ ಅಂತರವನ್ನು ಕಾಪಾಡಿಕೊಂಡಿದ್ದಾಗ ಅವರು ಕೊಡುವ ಗೌರವಕ್ಕೂ ಸಾಕಷ್ಟು ವ್ಯತ್ಯಾಸವಂತೂ ಇದ್ದೇ ಇದೆ. ಇಲ್ಲಿಯೂ ಅತ್ತಕಡೆಯ "ಟೇಕನ್‌ಫಾರ್ ಗ್ರಾಂಟೆಡ್" ಮನೋಭಾವ ಕೆಲಸ ಮಾಡಿರುತ್ತೆ. ಎಮೋಷನಲ್ ಜಾಸ್ತಿ ಇರುವವರಿಗೆ ಇವೆರಡರ ಸೂಕ್ಷ್ಮತೆ ಅರಿಯುವುದು ಸ್ವಲ್ಪ ಕಷ್ಟವೇ.!

ಹೀಗೇ ನಿತ್ಯಬದುಕಿನ ಹತ್ತಾರು ಉದಾಹರಣೆ ಕೊಡಬಹುದಾದರೂ ನೀವು ಒಬ್ಬರ ಫೋನ್ ಕರೆಗೆ, ಕೆಲಸಕ್ಕೆ, ಸಹಾಯಕ್ಕೆ ತೀರ ಸುಲಭಕ್ಕೆ ಸಿಗುವಂತಿದ್ದರೆ ಎಲ್ಲೋ ಒಂದು ಕಡೆ ನಿಮ್ಮ ವ್ಯಕ್ತಿತ್ವವನ್ನು ಬಹಳ ಸುಲಭಕ್ಕೆ ಅಳೆದುಬಿಡುವ ಅಪಾಯವೂ ಉಂಟು.

ಹಾಗಂತ ಜೀವನದಲ್ಲಿ ಸರಳವಾಗಿರದೇ, ಅನಗತ್ಯ ಬಿಲ್ಡಪ್ ಕೊಟ್ಟುಕೊಂಡು ನಕರಾ ಮಾಡುತ್ತಲೇ ಇರಬೇಕೇ...? ಏನೂ ಗೊತ್ತಿಲ್ಲದಿದ್ದರೂ ಎಲ್ಲವೂ ಗೊತ್ತಿರುವಂತೆ ಪೋಸು ಕೊಡಬೇಕೇ ? ಎಂಬೆಲ್ಲಾ ಸಹಜ ಡೌಟುಗಳಿದ್ದರೆ ಅದಕ್ಕೆ ಸಿಂಪಲ್ ಉತ್ತರ " ಇದು ನಿಮ್ಮ ಜೀವನ,ನೀವು ಹೇಗೆ ಬೇಕಾದರೂ ನಿಮಗಿಷ್ಟವಾದ ರೀತಿಯಲ್ಲಿ ಇರಬಹುದು. ಆದರೆ ಮತ್ತೊಬ್ಬರ ಪಾಲಿಗೆ ನೀವು.... *(ಮುಂದಿನ ಪುಟಕ್ಕೆ)*

## ಬೌದ್ಧಿಕ ಸಿರಿ *ಭಾರತೀಯ ರಾಜ ಮತ್ತು ರೋಲ್ಸ್ ರಾಯ್ಸ್!*

ಮೂಲತಃ ಭಾರತೀಯ ರಾಜರು ಐಷಾರಾಮಿಗಳಾಗಿದ್ದರು, ಶ್ರೀಮಂತಿಕೆಯಲ್ಲಿ ಬ್ರಿಟಿಷ್ ಕಿಂಗ್‌ಗಳನ್ನು ಕೂಡ ಹಿಂದಿಕ್ಕಿದ್ದರು. ವಜ್ರ, ಮುತ್ತು, ರತ್ನ, ಬಂಗಾರವಾಗಲಿ ಅಥವಾ ಐಷಾರಾಮಿ ಕಾರುಗಳಲ್ಲಿ ಓಡಾಡುವುದಾಗಲಿ ಯಾವುದೇ ಹಂತದಲ್ಲಿಯೂ ಬ್ರಿಟಿಷ್ ರಾಜರಿಗಿಂತ ಮುಂದಿದ್ದರು.

1920ರಲ್ಲಿ ಮಹಾರಾಜ ಜಯಸಿಂಹ ಪ್ರಭಾಕರ್ ಅವರು ಭಾರತದಿಂದ ಲಂಡನ್ ನಗರಕ್ಕೆ ಸಮಯ ಕಳೆಯಬೇಕು ಎಂದು ಹೋಗಲು ನಿರ್ಧಾರ ಮಾಡುತ್ತಾರೆ. ಭಾರತದಲ್ಲಿ ಐಷಾರಾಮಿ ಜೀವನವನ್ನು ಅನುಭವಿಸಿದ ನಂತರ ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನವನ್ನು ಅನುಭವಿಸಬೇಕೆಂದು, ಒಂದು ದಿನ ಅವರು ಆಡಂಬರದ ಬಟ್ಟೆಗಳನ್ನಾಗಲಿ, ಸೇವಕರನ್ನಾಗಲಿ ಬಳಸದೇ, ಒಬ್ಬಂಟಿಯಾಗಿ ಲಂಡನ್ ರಸ್ತೆಯಲ್ಲಿ ಓಡಾಡುತಿದ್ದರು.

ಒಂದು ರಸ್ತೆ ಪಕ್ಕದಲ್ಲಿ ರೋಲ್ಸ್ ರಾಯ್ಸ್ ಕಾರ್ ಕಾಣಿಸಿತು, ಮಹಾರಾಜರೂ ಐಷಾರಾಮಿ ಕಾರುಗಳ ಪ್ರಿಯರು ಆಗಿದ್ದರು. ಶೋರೂಮ್‌ನಲ್ಲಿ ಹೊಸ ರೋಲ್ಸ್ ರಾಯ್ಸ್ ಕಾರನ್ನು ನೋಡಿ, ಅದನ್ನು ಖರೀದಿಸುವ ತೀರ್ಮಾನ ಮಾಡಿದರು.

ಅವರು ಆ ಕಾರನ್ನು ಕೊಳ್ಳಲೇಬೇಕು ಎಂಬ ಉತ್ಸಾಹದಲ್ಲಿ ಆ ಕಾರಿನ ಬೆಲೆ ತಿಳಿದುಕೊಳ್ಳಲು ಪಕ್ಕದಲ್ಲೆ ನಿಂತಿದ್ದ ಬ್ರಿಟಿಷ ಸೇಲ್ಸ್‌ಮನ್‌ಗೆ ಕೇಳಿದರು. ಆ ಸೇಲ್ಸ್‌ಮನ್ ಸಾಮಾನ್ಯರಂತೆ ಕಂಡ ಮಹಾರಾಜರಿಗೆ, ಸಾಮಾನ್ಯ ಭಾರತೀಯ ಪ್ರಜೆ ನೀನು, ಇದೆಲ್ಲ ನಿನ್ನಂಥವರು ಖರೀದಿಸಲು ಸಾಧ್ಯವಿಲ್ಲ ಎಂದು ಅವಮಾನಿಸುವ ಮೂಲಕ, ಹೊರಗೆ ನಡೆ ಎಂದು ಹೊರ ಹೋಗುವ ದಾರಿಯನ್ನು ತೋರಿಸಿದನು. ಈ ಅವಮಾನವನ್ನು ಸಹಿಸಿಕೊಂಡು ಸುಮ್ಮನೆ ನಿಂತಿದ್ದ ಮಹಾರಾಜರನ್ನು ಶೋರೂಮ್ ನಿಂದ ಹೊರಹಾಕಿದರು.

ತನ್ನ ಸಿಟ್ಟನ್ನು ಹಿಡಿತದಲ್ಲಿಟ್ಟುಕೊಂಡು ತನಗೆ ಮಾಡಿದ ಅವಮಾನದ ಸೇಡನ್ನು ಅವಮಾನ ಮಾಡುವ ಮೂಲಕವೇ ತೀರಿಸಿಕೊಳ್ಳಬೇಕು ಎಂಬ ನಿರ್ಧಾರ ಮಾಡಿದ ಮಹಾರಾಜರು, ಲಂಡನ್‌ನಲ್ಲಿ ತಂಗಿದ್ದ ಹೋಟೆಲ್‌ಗೆ ವಾಪಸ್ಸಾದರು. ಅಳ್ವಾರ್‌ನ ಮಹಾರಾಜ ರೋಲ್ಸ್ ರಾಯ್ಸ್ ಕಾರು ಖರೀದಿಸಲು ಲಂಡನ್‌ಗೆ ಬರುತ್ತಿದ್ದಾರೆ ಎಂಬ ಸುದ್ದಿಯನ್ನು ಕಾರ್ ಶೋ ರೂಮ್ ನವರಿಗೆ ಮುಟ್ಟಿಸಿ ಎಂದು ಆಜ್ಞೆ ಮಾಡಿದರು. ನಂತರ ರಾಜ ತನ್ನ ಪೋಷಾಕು ಧರಿಸಿ ಕಾರ್ ಶೋ ರೂಮ್ ಮುಂದೆ ಬಂದು ನಿಂತರು, ಆಗ ಅಲ್ಲಿ ಅವರಿಗಾಗಿ, ಕೆಂಪು ರತ್ನಗಂಭಳಿ ಹಾಸಿ ಅತಿ ವಿಜೃಂಭಣೆಯಿಂದ ಸ್ವಾಗತಿಸಿದರು. ಶೋರೂಮ್ ಒಳಗೆ ಬರುತ್ತಿದ್ದಂತೆಯೆ ಏಳು ರೋಲ್ಸ್ ರಾಯ್ಸ್ ಕಾರುಗಳನ್ನು ನಗದು ಹಣ ನೀಡಿ ಖರಿದಿಸಿದರು.

ಒಂದೇ ಬಾರಿ ಇಷ್ಟೊಂದು ಕಾರ್ ಆರ್ಡರ್ ಮಾಡಿದ್ದನ್ನು ಕಂಡ ಶೋ ರೂಮ್‌ನಲ್ಲಿರುವವರು ಒಂದು ಕ್ಷಣ ದಂಗಾದರು, ಅಷ್ಟೇ ಅಲ್ಲದೆ ಈ ಮುಂಚೆ ಹೊರದಬ್ಬಿದ ಸೇಲ್ಸ್ ಮ್ಯಾನ್‌ಗೆ ಕರೆದು, ಭಾರತದಲ್ಲಿ ಇರೋ ತನ್ನ ಅರಮನೆಗೆ ಮುಟ್ಟಿಸಲು ಹೇಳಿದರು. ಇಷ್ಟಕ್ಕೆ ಸುಮ್ಮನಿರದ ಮಹಾರಾಜರು, ಆ ಏಳು ಕಾರುಗಳು ಭಾರತಕ್ಕೆ ಬಂದು ಮುಟ್ಟುತ್ತಿದ್ದಂತೆ ಅವುಗಳನ್ನು ನಗರಪಾಲಿಕೆಗೆ ಕೊಟ್ಟು, ಇಂದಿನಿಂದ ಕಾರಿನ ಮುಂದೆ ಹಾಗೂ ಹಿಂದೆ ಪೊರಕೆ ಕಟ್ಟುವ ಮೂಲಕ ನಗರಪೂರ್ತಿ ಕಸ ಗುಡಿಸಲು ಈ ಕಾರುಗಳನ್ನು ಬಳಸಬೇಕೆಂದು ಆದೇಶ ನೀಡಿದರು.

ಭಾರತೀಯರು ಕಸ ವಿಲೇವಾರಿ ಮಾಡಲು ರೋಲ್ಸ್ ರಾಯ್ಸ್ ಕಾರು ಬಳಸುತ್ತಿದ್ದಾರೆಂಬ ಸುದ್ದಿ ಪ್ರಪಂಚದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಲು ಶುರುವಾಯಿತು. ವಿಶ್ವದ ಅನೇಕ ರಾಷ್ಟ್ರಗಳು ಈ ಕಾರನ್ನು ಖರಿದಿಸುವುದನ್ನು ಬಿಟ್ಟು, ದಿಢೀರ್ ಆಗಿ ರೋಲ್ಸ್ ರಾಯ್ಸ್ ಮಾರುಕಟ್ಟೆ ಕುಸಿಯಿತು. ಈ ಸುದ್ದಿ ತಿಳಿದ ರೋಲ್ಸ್ ರಾಯ್ಸ್ ಕಂಪನಿಯ ಮಾಲಿಕ, ಆಗಿರುವ ಘಟನೆಗೆ ಕ್ಷಮೆ ಕೋರಿ ದಯವಿಟ್ಟು ಕಾರನ್ನು ಕಸದ ವಿಲೇವಾರಿ ಮಾಡಲು ಬಳಸಬೇಡಿ ಎಂದು ಮನವಿ ಮಾಡಿ, ಆರು ಹೊಸ ರೋಲ್ಸ್ ರಾಯ್ಸ್ ಕಾರುಗಳನ್ನು ಭಾರತದ ರಾಜನಿಗೆ ಉಡುಗೊರೆಯಾಗಿ ನೀಡಿದರು.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

*(2ನೇ ಪುಟದಿಂದ)* "ಟೇಕನ್ ಫಾರ್ ಗ್ರಾಂಟೆಡ್" ಥರಾ ಆಗದಿದ್ದರೇ, ಅಷ್ಟೇ ಸಾಕು...!

ಆಯ್ತು! ಒಬ್ಬರು ನಮ್ಮನ್ನು ಟೇಕನ್ ಫಾರ್ ಗ್ರಾಂಟೆಡ್ ಅಂತ ಅಂದುಕೊಂಡರೆ ಏನು ಪ್ರಾಬ್ಲಮ್ಮು, ಅಂದಿರಾ..? ಕುಟುಂಬದ ಒಳಗಾಗಲೀ ಅಥವಾ ಹೊರಗಾಗಲೀ ಒಮ್ಮೆ ನಿಮ್ಮನ್ನು ಹಾಗೆ ಟ್ರೀಟ್ ಮಾಡಲು ಶುರು ಮಾಡಿದಾಗ ನಿಮ್ಮ ಮನಸ್ಸು ನಿಧಾನಕ್ಕೆ ಮತ್ತೊಬ್ಬರ ವರ್ತನೆ ಬಗೆಗೆ ಕೆರೆದು ಗಾಯ ಮಾಡಿಕೊಳ್ಳಲು ಶುರುಮಾಡುತ್ತೆ. ಒಬ್ಬ ವ್ಯಕ್ತಿ ತಾನು ಏನೊಂದೂ ಮಾಡದಿದ್ದರೂ ಅವನಲ್ಲಿ ಯಾವ ಅರ್ಹತೆ ಇರದಿದ್ದರೂ ಅಂಥವನನ್ನು ಓವರ್ ಬಿಲ್ಡಪ್ ಕೊಟ್ಟು ಮೆರೆಸುವ ಈ ಸಮಾಜ, ತಾನು ಮತ್ತೊಬ್ಬರಿಗಾಗಿ ಅಷ್ಟೆಲ್ಲಾ ಕೆಲಸ ಮಾಡಿದರೂ, ಎಲ್ಲರಿಗೂ ಬೇಕಾದವಂತೆ ಇದ್ದರೂ ತನ್ನ ಕೊಡುಗೆಯನ್ನು ನಿಕೃಷ್ಟವಾಗಿಸಿ ಕಡೆಗಣಿಸುತ್ತದೆಯಲ್ಲಾ... ಎಂಬ ಸಣ್ಣಕೊರಗು ಮನದಲ್ಲಿ ತಣ್ಣಗೆ ಟಿಸಿಲೊಡೆಯ ಲಾರಂಭಿಸುತ್ತದೆ. ಅದಷ್ಟೇ ಅಲ್ಲ,ನಿಮ್ಮಲ್ಲಿರಬಹುದಾದ ಒಳ್ಳೆಯತನವನ್ನು ಸರಳತೆಯನ್ನು ಅಥವಾ ಇತರರಿಗೆ ಹೆಚ್ಚು ಗೌರವಕೊಟ್ಟು ಮಾತನಾಡಿಸುವ ಸ್ವಭಾವವನ್ನೇ ದೌರ್ಬಲ್ಯ ಎಂದು ವರ್ಗೀಕರಿಸಿಬಿಡುವ ಅಪಾಯವನ್ನೂ ಎಸುರಿಸಬೇಕಾಗಬಹುದು.!

ಒಂದೇ ಮಾತಿನಲ್ಲಿ ಸಮ್‌ಅಪ್ ಮಾಡುವುದಾದರೆ ನಮ್ಮ ಜೀವನದಲ್ಲಿನ ಸರಳತೆ, ಸೌಮ್ಯತೆ ಅಥವಾ ಒಳ್ಳೆಯತನವೆಂಬುದು ಮತ್ತೊಬ್ಬರಿಗೆ "ಟೇಕನ್ ಫಾರ್ ಗ್ರಾಂಟೆಡ್" ಆಗದಂತೆ ನೋಡಿಕೊಳ್ಳುವ ಸೂಕ್ಷ್ಮತೆ ನಮ್ಮೊಳಗೆ ಜಾಗೃತವಾಗಿದ್ದಷ್ಟೂ ಒಳ್ಳೆಯದು.

**ಮರೆಯುವ ಮುನ್ನ,**

ಬಹಳಷ್ಟು ಸಾರಿ ಇತರರು ನಿಮ್ಮಲ್ಲಿರುವ ಅಗಾಧವಾದ ತಾಳ್ಮೆಯನ್ನೇ ದೌರ್ಬಲ್ಯವೆಂದು ಪರಿಗಣಿಸಿಬಿಡುತ್ತಾರೆ, ಪ್ರಾಮಾಣಿಕತೆಯನ್ನೇ ಪೆಕ್ಯೂಲಿಯರ್ ಅಂದುಬಿಡುತ್ತಾರೆ. ಹಾಗೆಯೇ ಇತರರ ಕಷ್ಟಕ್ಕೆ ಅಥವಾ ಯಾಚನೆಗೆ ಸುಲಭಕ್ಕೆ ಸಿಗಬಹುದಾದ ನಿಮ್ಮ ಅಂತರಂಗದ ದಯಾಳು ಸ್ವಭಾವವನ್ನೇ ಗಾಂಧಿಗಿರಿಗೆ ಹೋಲಿಸಿ ತೀರ ತುಚ್ಛೀಕರಿಸಿ ಅಥವಾ ಯೂಸ್ ಲೆಸ್ ಎಂದು ಭಾವಿಸುವುದೂ ಉಂಟು.

ಇದು ಎಲ್ಲರ ವಿಷಯದಲ್ಲೂ ಹೀಗೇ ಆಗಬಹುದು ಎಂದೇನಲ್ಲ. ಆದರೆ ಬಹುತೇಕರ ಅನುಭವಗಳು ಹೆಚ್ಚು ಕಡಿಮೆ ಇದೇ ಟ್ರ್ಯಾಕಿನಲ್ಲೇ ಸ್ಪರ್ಧೆ ಮಾಡುತ್ತಲೇ ಇರುತ್ತವೆ.

ಮೇಲಾಗಿ ಇಲ್ಲಿ ನಾನು ಬೇಕಂತಲೇ ಒಬ್ಬರ ಸಹಾಯ ನೆನೆದು ಕೃತಜ್ಞತೆ ಹೇಳುವ ಉತ್ತಮ ವರ್ಗವನ್ನು ಹೊರಗಿಟ್ಟು ಈ ಮಾತುಗಳನ್ನು ಹೇಳುತ್ತಿದ್ದೇನೆ.

ಎಲ್ಲಿಯವರೆಗೆ ನಮಗೆ ಇಷ್ಟವಿರಲೀ ಬಿಡಲೀ, ಇತರರೊಂದಿಗೆ ಅಗತ್ಯ ಸ್ನೇಹ ವಿಶ್ವಾಸಗಳನ್ನು ಉಳಿಸಿಕೊಂಡೂ ನಮ್ಮದೇ ಆದ ಒಂದು ವೃತ್ತಿಪರ, ಖಾಸಗಿತನದ ಗೌರವಯುತ ಅಂತರವನ್ನು ಕಾಪಿಟ್ಟುಕೊಳ್ಳುವುದಿಲ್ಲವೋ ಆಗೆಲ್ಲಾ ಬಹು ಜನರ ದೃಷ್ಟಿಯಿಂದ ನಾವು ಟೇಕನ್ ಫಾರ್ ಗ್ರಾಂಟೇಡ್ ಆದಂತೆಯೇ..!!

ಲೇಖನ: **ಹಿರಿಯೂರು ಪ್ರಕಾಶ್** (ಬರಹಗಾರರು ಮತ್ತು ಅಂಕಣಕಾರರು) - ಫೇಸ್ ಬುಕ್ ಪುಟದಿಂದ



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 30ನೇ ವಾರದ ಸಭೆ 10/2/2026 ರಂದು RCC ಕಾರ್ಯಾಲಯದಲ್ಲಿ ನಡೆಯಿತು.ನಿಕಟಪೂರ್ವ ಅಧ್ಯಕ್ಷರಾದ ರೊ. ಸುನಿಲ್ ಕುಮಾರ್ ಅವರು ಸಭೆಯ ಅಧ್ಯಕ್ಷತೆ ವಹಿಸಿದರು.ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು. ರೊ. ಸುನಿಲ್ ಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿದರು.ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು

ಕಾರ್ಯದರ್ಶಿ ಕೃಷ್ಣಪ್ಪ ಅವರು RCC conference ನಲ್ಲಿ RCC ಐಸಿರಿಯ ಉತ್ತಮ ಪ್ರದರ್ಶನವನ್ನು ಪ್ರಶಂಸಿಸಿದರು. ರೋಟರಿ ಐಸಿರಿ ಮುಂದಿನ ದಿನಗಳಲ್ಲಿ ನಡೆಸಬೇಕಿರುವ ಕಾರ್ಯಕ್ರಮಗಳ ಬಗ್ಗೆ ಸಲಹೆ ಸೂಚನೆ ನೀಡುವಂತೆ ಸದಸ್ಯರಿಗೆ ಸೂಚಿಸಿದರು. RCC ಐಸಿರಿಯ ಸಾಧನೆಗೆ ಸಂಪೂರ್ಣ ಸಹಾಯ ನೀಡಿ ಪ್ರೋತ್ಸಾಹಿಸಿದ ರೊ. ಪ್ರಭಾಕರ್ ಶೆಟ್ಟಿ ಅವರನ್ನು ಅಭಿನಂದಿಸಲಾಯಿತು.ರೊ. ಪ್ರಭಾಕರ್ ಶೆಟ್ಟಿ ಅವರು RCC ಜಿಲ್ಲಾ ಸಮ್ಮೇಳನದ ಅನುಭವ ಮತ್ತು ಪೂರ್ವ ತಯಾರಿಯ ಬಗ್ಗೆ ವಿವರಿಸಿದರು.

ಫೆಬ್ರವರಿ 10 ರಂದು ನಿಧನರಾದ RCC ಯ ಸಕ್ರಿಯ ಸದಸ್ಯ ಕೇಶವ್ ಅವರಿಗೆ ಸಂತಾಪ ಸೂಚಿಸಿ ಒಂದು ನಿಮಿಷದ ಮೌನ ಪ್ರಾರ್ಥನೆ ನಡೆಸಲಾಯಿತು.

ರೊ. ರಾಜೇಶ್ ಡಿ. ಶೆಣೈ ಅವರು ರಚಿಸಿದ ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಪ್ರಭಾಕರ್ ಯು. ರೆಂಜಾಳ ಅವರು ಬಿಡುಗಡೆಗೊಳಿಸಿದರು. ರೊ ಗುರುಪ್ರಸಾದ್ ಕಾಮತ್ ಸಹಕರಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು RCC ಜಿಲ್ಲಾ ಸಮ್ಮೇಳನದ ಅನುಭವಗಳನ್ನು ಹಂಚಿಕೊಂಡರು.ರೊ ಸ್ಮಿತಾ ಕಾಮತ್ ಅವರು ಜಿಲ್ಲಾ RCC ಸಮ್ಮೇಳನದ ಬಗ್ಗೆ ಮಾತನಾಡಿದರು ಅಂತೆಯೇ ಇಂಟರಾಕ್ಟ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿ ತಿಳಿಸಿದರು. ರೊ. ಎ. ಗಣೇಶ್ ಅವರು ಮಾತನಾಡಿ RCC ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿದ ಅನುಭವ ಹಂಚಿಕೊಂಡರು. ಸಮ್ಮೇಳನದಲ್ಲಿ ಆಸಕ್ತ RCC ಸದಸ್ಯರಿಗೆ ಹಾಗೂ ಅವರ ಕುಟುಂಬ ಮತ್ತು ಪರಿಚಯದ ಯುವಕರಿಗೆ ಮಣಿಪಾಲದ ಸ್ಕಿಲ್ development ಸಂಸ್ಥೆಯ ಪರವಾಗಿ ಉಚಿತ ತರಬೇತಿ ಕಾರ್ಯಕ್ರಮ ನಡೆಸುವುದರ ಬಗ್ಗೆ ಕಿರುಮಾಹಿತಿ ನೀಡಿರುವುದಾಗಿ ತಿಳಿಸಿದರು. ಐಸಿರಿ ಹಾಗೂ RCC ಐಸಿರಿ ಜಿಲ್ಲೆಯಲ್ಲಿ ಉತ್ತಮ ಹೆಸರು ಮಾಡಿದೆ. ಅದನ್ನು ಉಳಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಜೊತೆಗೆ ಫೆಬ್ರವರಿ 23ಕ್ಕೆ ನಡೆಯಲಿರುವ ವಿಶ್ವ ತಿಳುವಳಿಕಾ ದಿನಾಚರಣೆ ಬಗ್ಗೆ ಮಾಹಿತಿ ನೀಡಿದರು.

ರೊ. ಸುನಿಲ್ ಕುಮಾರ್ ಅವರು ಅಧ್ಯಕ್ಷೀಯ ಭಾಷಣದಲ್ಲಿ ತನ್ನ ವರ್ಷದ RCC ಅಧ್ಯಕ್ಷರಾದ ಸತೀಶ್ ಹಾಗೂ ಕಾರ್ಯದರ್ಶಿ ಶಾಲಿನಿ ಅವರನ್ನು ಅಭಿನಂದಿಸಿದರು. ಮುಂದಿನ ವರ್ಷದ ಕಾರ್ಯಕ್ರಮಗಳ ರೂಪುರೇಷೆಗಳನ್ನು ತಯಾರಿಸುವಂತೆ ಸೂಚಿಸಿದರು.ಲಕ್ಕಿ ರೋಟರಿಯನ್ ಆಯ್ಕೆಯನ್ನು ರೊ. ಸುನಿಲ್ ಕುಮಾರ್ ನಡೆಸಿದರು. ರೊ. ಎ. ಗಣೇಶ್ ಅವರು ಲಕ್ಕಿ ರೋಟರಿಯನ್ ಆಗಿ ಆಯ್ಕೆಯಾದರು.

ಪ್ರಕಟಣೆಯಲ್ಲಿ ರೊ. ಕೃಷ್ಣಪ್ಪ ಅವರು 22 ಫೆಬ್ರವರಿಯಂದು ನಡೆಯಲಿರುವ ತಮ್ಮ ನೂತನ ನಿರ್ಮಿತ ಮನೆ ಆಂಜನೇಯ ಕೃಪ ಇದರ ಗೃಹಪ್ರವೇಶ ಸಮಾರಂಭಕ್ಕೆ ಸದಸ್ಯರೆಲ್ಲರನ್ನೂ ಆಹ್ವಾನಿಸಿದ್ದಾರೆ. ರೊ. ಗುರುಪ್ರಸಾದ್ ಕಾಮತ್ ಅವರು 15 ಫೆಬ್ರವರಿ ಯಂದು ನಡೆಯಲಿರುವ ಅವರ ನವೀಕೃತ ಮನೆಯ ಗೃಹಪ್ರವೇಶಕ್ಕೆ ಎಲ್ಲ ಸದಸ್ಯರನ್ನೂ ಆಹ್ವಾನಿಸಿದ್ದಾರೆ.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 32ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಮೂವತ್ತೆರಡನೇ ಸಂಚಿಕೆಯನ್ನು, ಸಹ ಸಂಪಾದಕ ರೊ. PHF. ಗುರುಪ್ರಸಾದ್ ಕಾಮತ್ ಮೂಲಕ ರೊ. PHF. ಪ್ರಭಾಕರ್ ಯು. ರೆಂಜಾಳ ಅವರು 10/02026 ರಂದು ಬಿಡುಗಡೆಗೊಳಿಸಿದರು.




ರೋಟರಿ ಐಸಿರಿಯ 30ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ.PHF. ಸುನಿಲ್ ಕುಮಾರ್ ಅವರು ನಡೆಸಿ, ರೊ. PHF. ಡಾ. ಎ. ಗಣೇಶ್ ಅದೃಷ್ಟಶಾಲಿಯಾಗಿ ಆಯ್ಕೆಯಾದರು.



ರೊ. ಸುಕೇಶ್ ಕುಂದರ್

ಪ್ರಸನ್ನ ಕುಮಾರ್ ಶೆಟ್ಟಿ ನೇತೃತ್ವದ ಚೈತನ್ಯ ಕಲಾವಿದರು,ಬೈಲೂರು ನಾಟಕ ತಂಡದೊಂದಿಗೆ ಬಿಲ್ಲವರ ಅಸೋಸಿಯೇಷನ್ ಬಹರೈನ್ ಇವರ ವಾರ್ಷಿಕೋತ್ಸವದಲ್ಲಿ - "ಅಷ್ಟಮಿ" ನಾಟಕದಲ್ಲಿ ಪ್ರದರ್ಶನ ನೀಡಲು ವಿದೇಶ ಪ್ರಯಾಣ ಮಾಡುತ್ತಿರುವ ನಿಮಗೆ ಹಾರ್ದಿಕ ಶುಭಾಶಯಗಳು.



ಕೋಸ್ಟಲ್ ವುಡ್ ಕಲಾವಿದರ ಹಾಗೂ ತಂತ್ರಜ್ಞರ ಸಹಕಾರಿ ಒಕ್ಕೂಟದ ವತಿಯಿಂದ ನಡೆದ ದಶಯಾತ್ರೆ ಸಂಭ್ರಮದ ಕ್ರಿಕೆಟ್ ಲೀಗ್ ಪಂದ್ಯದಲ್ಲಿ, ರೋಟರಿ ಐಸಿರಿ ಸಮುದಾಯಸೇವಾ ನಿರ್ದೇಶಕ, ಉದ್ಯಮಿ ರೊ. ಕೆ. ಪ್ರಕಾಶ್ ಶೆಣೈ ನೇತೃತ್ವದ ಕಲಾಶಿಲ್ಪ ನಿಧಿ ಬಡಗಬೆಟ್ಟು ತಂಡ ಪ್ರಥಮ ಸ್ಥಾನ ಪಡೆಯಿತು.